# ನಗರಸಭಾ ಕಾರ್ಯಾಲಯ, ಮಡಿಕೇರಿ

ಕ್ರ.ಸಂ. ಮನಸ/ನೀ.ಸ.ವಿ/ ಟ್ಯಾಂಕರ್/01/2009-10 ದಿನಾಂಕ::08.02.2010

## ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ ಈ ನಗರಸಭೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲು ಲಾರಿ ಮೌಂಟೆಡ್ ಟ್ಯಾಂಕರ್(10,000ಲೀ ಮತ್ತು 5,000 ಲೀ ಸಾಮರ್ಥ್ಯವುಳ್ಳ)ಮಾಲೀಕರಿಂದ ಕನಿಷ್ಟ ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹರು ಟೆಂಡರ್‌ಗಳನ್ನು ನಿಗದಿತ ಇ.ಎಂ.ಡಿ.ಯೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ನಿಗದಿತ ದಿನಾಂಕದೊಳಗೆ 'ಪೌರಾಯುಕ್ತರು ನಗರಸಭೆ, ಮಡಿಕೇರಿ' ಇವರಿಗೆ ತಲುಪಿಸತಕ್ಕದ್ದು.

ಹೆಚ್ಚಿನ ಮಾಹಿತಿಯನ್ನು ಕಛೇರಿವೇಳೆಯಲ್ಲಿ ಜೆ.ಇ(ವಿದ್ಯುತ್) ಇವರಲ್ಲಿ ಅಥವಾ ಕೊಡಗು ಜಿಲ್ಲಾ ಟೆಂಡರ್ ಬುಲ್ಲೆಟಿನ್‌ನಲ್ಲಿ ಅಥವಾ ವೆಬ್‌ಸೈಟ್ www.madikericity.gov.inನಲ್ಲಿ ಪಡೆದು ಕೊಳ್ಳಬಹುದು.

## ಟೆಂಡರ್ ಸಲ್ಲಿಸುವ ಬಗ್ಗೆ ವಿವರ

1. ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 09.03.2010ರ ಸಾಯಂಕಾಲ 04.00 ಗಂಟೆವರೆಗೆ.
2. ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ : 10.03.2010ರ ಸಾಯಂಕಾಲ 04.00 ಗಂಟೆವರೆಗೆ.
3. ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಚೇರಿಗೆ ಸಲ್ಲಿಸುವ ಕೊನೆಯ ದಿನಾಂಕ: : 12.03.2010ರ ಸಾಯಂಕಾಲ 04.00 ಗಂಟೆವರೆಗೆ.
4. ಟೆಂಡರ್ ತೆರೆಯುವ ದಿನಾಂಕ : 12.03.2010ರ ಸಾಯಂಕಾಲ 05.00 ಗಂಟೆಗೆ ಅಥವಾ ಸೂಚಿಸಿದ ದಿನದಂದು.

| ಕ್ರ.ಸಂ. | ಕಾಮಗಾರಿ ಹೆಸರು | ಟೆಂಡರ್ ಫಾರಂ ಬೆಲೆ (ರೂ. ಗಳಲ್ಲಿ) | ಮುಂಗಡ ಠೇವಣಿ (ರೂ. ಗಳಲ್ಲಿ) |
|---|---|---|---|
| 1 | ನಗರಸಭೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವುದು. | 300.00 + 8% ತೆರಿಗೆ | 5,000/- |

## ಷರತ್ತುಗಳು:

1. ಇ.ಎಂ.ಡಿ. ಹಣವನ್ನು ಪೌರಾಯುಕ್ತರು, ನಗರಸಭೆ, ಮಡಿಕೇರಿರವರ ಹೆಸರಿನಲ್ಲಿ ಖರೀದಿಸಿ ಟೆಂಡರ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
2. ಟೆಂಡರ್ ಸಲ್ಲಿಸುವವರು ಕೆ.ಎಸ್.ಟಿ/ ಸಿ.ಎಸ್.ಟಿ./ವಿ.ಎ.ಟಿ. ಪಾವತಿದಾರರಾಗಿದ್ದು ಈ ಬಗ್ಗೆ ದೃಢೀಕರಣ ಪತ್ರವನ್ನು ಟೆಂಡರ್ ನೊಂದಿಗೆ ಲಗತ್ತಿಸತಕ್ಕದ್ದು.
3. ಸದರಿ ಕೆಲಸದಲ್ಲಿ ಅನುಭವವಿರುವವರು ಮಾತ್ರ ಟೆಂಡರ್ ಸಲ್ಲಿಸತಕ್ಕದ್ದು.
4. ಅನುಮೋದಿತ ಟೆಂಡರ್‌ದಾರರಿಗೆ ಬೇಸಿಗೆಯಲ್ಲಿ ಈ ನಗರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಾದಲ್ಲಿ ಮಾತ್ರ ಲಾರಿಮೌಂಟೆಡ್ ಟ್ಯಾಂಕರ್‌ಗಳಲ್ಲಿ ನೀರುಸರಬರಾಜು ಮಾಡುವಂತೆ ಕಾರ್ಯಾದೇಶ ನೀಡಲಾಗುವುದು.
5. ಕಾರ್ಯಾದೇಶ ನೀಡಿದ 3 ದಿನಗಳ ಒಳಗೆ ಟ್ಯಾಂಕರ್‌ಗಳನ್ನು ಈ ನಗರಸಭೆಗೆ ಒದಗಿಸಿ ಬೂಸ್ಟರ್ ಅಥವಾ ಸಮೀಪದಲ್ಲಿರುವ ಕೊಳವೆಬಾವಿಗಳಿಂದ ನೀರನ್ನು ಸಂಗ್ರಹಿಸಿಕೊಂಡು ಈ ನಗರಸಭೆಯ ಸಿಬ್ಬಂದಿಗಳು ಸೂಚಿಸಿದ ಸ್ಥಳಗಳಿಗೆ ನೀರು ವಿತರಣೆ ಮಾಡತಕ್ಕದ್ದು.
6. 10,000 ಲೀ ಸಾಮರ್ಥ್ಯದ ಟ್ಯಾಂಕರ್‌ಗಳು ದಿನವೊಂದಕ್ಕೆ ಕನಿಷ್ಟ 5 ಟ್ರಿಪ್ ಹಾಗೂ 5,000 ಲೀ ಸಾಮರ್ಥ್ಯದ ಟ್ಯಾಂಕರ್‌ಗಳು ದಿನವೊಂದಕ್ಕೆ ಕನಿಷ್ಟ 8 ಟ್ರಿಪ್ ನೀರನ್ನು ಸೂಚಿಸಿದ ಸ್ಥಳಗಳಿಗೆ ಸರಬರಾಜು ಮಾಡತಕ್ಕದ್ದು.

7. ಟೆಂಡರ್ ದಾರರು ಒದಗಿಸುವ ಲಾರಿಮೌಂಟೆಡ್ ಟ್ಯಾಂಕರ್‌ಗಳು ಉತ್ತಮ ಸ್ಥಿತಿಯಲ್ಲಿದ್ದು ಗುಡ್ಡದಂಥ ಪ್ರದೇಶಗಳಿಗೆ ಯಾವುದೇ ತಾಂತ್ರಿಕ ತೊಂದರೆಯಿಲ್ಲದಂತೆ ನೀರುಸರಬರಾಜು ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು ಹಾಗೂ ನೀರುಸರಬರಾಜು ಮಾಡುವ ಸಂದರ್ಭ ವಾಹನ ದುರಸ್ಥಿಗೆ ಬಂದಲ್ಲಿ ಬದಲೀ ವಾಹನ ವ್ಯವಸ್ಥೆಯನ್ನು ಕೂಡಲೇ ಮಾಡತಕ್ಕದ್ದು.
8. ಇಂಧನ, ಚಾಲಕರು ಮತ್ತು ಇತರೆ ವೆಚ್ಚಗಳೂ ಸೇರಿದಂತೆ ವಾಹನಗಳ ಸಂಪೂರ್ಣ ನಿರ್ವಹಣೆಯನ್ನು ಸದರಿ ಟೆಂಡರ್ ದಾರರೇ ನಿರ್ವಹಿಸಬೇಕಿರುತ್ತದೆ.
9. ಈ ಟೆಂಡರನ್ನು ಒಪ್ಪುವ ಅಥವ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.
10. ಬಿಲ್ಲನ್ನು ಈ ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಪಾವತಿಸಲಾಗುವುದು.
11. ಯಶಸ್ವಿ ಟೆಂಡರ್‌ದಾರರು ಮೇಲಿನ ಎಲ್ಲಾ ಷರತ್ತುಗಳಿಗೆ ಬದ್ದರಾಗಿ ರೂ.50 ಮೌಲ್ಯದ ದಸ್ತಾವೇಜಿನಲ್ಲಿ ನಿಗದಿತ ನಮೂನ್ಯಲ್ಲಿ ಕರಾರು ಪತ್ರ ಬರೆದು ಕೊಡತಕ್ಕದ್ದು.

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| (ಪಿ.ಡಿ.ಪೊನ್ನಪ್ಪ.) | (ಲತಾ ಬಂಗೇರ ) | (ಟಿ.ಎಸ್.ಪ್ರಕಾಶ್) | (ಕೆ.ಶ್ರೀಕಾಂತ್ ರಾವ್) |
| ಅಧ್ಯಕ್ಷರು | ಉಪಾಧ್ಯಕ್ಷರು | ಸ್ಥಾಯಿ ಸಮಿತಿ ಅಧ್ಯಕ್ಷರು | ಪೌರಾಯುಕ್ತರು |
| ನಗರ ಸಭೆ ಮಡಿಕೇರಿ | ನಗರಸಭೆ, ಮಡಿಕೇರಿ | ನಗರಸಭೆ, ಮಡಿಕೇರಿ. | ನಗರಸಭೆ ,ಮಡಿಕೇರಿ |